ಸಿ.ಸಿ.ನಂ.238/2023

ಪಿ.ಡಬ್ಲೂಃ 1

ದಿನಾಂಕಃ 16/12/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಸ.ಸ.ಅ. ರವರು ಮುಂದುವರೆದ ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.**

**ಪಾಟೀ ಸವಾಲು 1 ನೇ ಆರೋಪಿ ಪರ ವಕೀಲರಿಂದ**

1. ಆರೋಪಿತರು ಯಾವುದೇ ಸ್ವಇಚ್ಛಾ ಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸುಳ್ಳು. ನಾನು ನಿಪಿ-7 ರಂತೆ ಯಾವುದೇ ಸ್ಥಳ ಮಹಜರ್ ಕ್ರಮ ಜರುಗಿಸಿರುವುದಿಲ್ಲ ಎಂದರೆ ಸುಳ್ಳು. ಅದೇ ರೀತಿ ನಾನು ಯಾವುದೇ ಸ್ಥಳಕ್ಕೆ ಭೇಟಿ ನೀಡಿರುವುದಿಲ್ಲ ಮತ್ತು ನಿಪಿ-8 ರಂತೆ ಅಮಾನತ್ತು ಪಂಚನಾಮೆಯನ್ನು ಮಾಡಿರುವುದಿಲ್ಲ ಎಂದರೆ ಸುಳ್ಳು. ಸ್ಥಳದಲ್ಲಿ ಯಾವುದೇ ಛಾಯಾ ಚಿತ್ರಗಳನ್ನು ತೆಗೆಸಿರುವುದಿಲ್ಲ ಎಂದರೆ ಸುಳ್ಳು. ನಾನು ಚಾಸಾ-8 ರವರನ್ನು ಠಾಣೆಗೆ ಕರೆಸಿರುವುದಿಲ್ಲ ಮತ್ತು ಅಮಾನತ್ತುಪಡಿಸಿಕೊಂಡಿದ್ದಂತಹ ಆಭರಣಗಳ ಗುಣಮಟ್ಟವನ್ನು ಪರಿಶೀಲಿಸಿರುವುದಿಲ್ಲ ಎಂದರೆ ಸುಳ್ಳು. ಅದೇ ರೀತಿ ಚಾಸಾ-8 ರವರು ನಿಪಿ-15 ರಂತೆ ಯಾವುದೇ ದೃಡೀಕರಣ ಪತ್ರವನ್ನು ನೀಡಿರುವುದಿಲ್ಲ ಎಂದರೆ ಸುಳ್ಳು. ನಾನು ಚಾಸಾ-3 ರಿಂದ 5 ರವರ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸುಳ್ಳು. ನಾನು ಸರಿಯಾಗಿ ತನಿಖೆಯನ್ನು ಮಾಡದೇ ಪಿರ್ಯಾದುದಾರರಿಗೆ ಸಹಾಯ ಮಾಡುವ ಸಲುವಾಗಿ ಆರೋಪಿತರ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**2 ನೇ ಆರೋಪಿ ಪರ ವಕೀಲರು 1 ನೇ ಆರೋಪಿ ಪರ ವಕೀಲರು ಮಾಡಿರುವುದಂತಹ ಪಾಟೀ ಸವಾಲನ್ನು ಅನುಸರಿಸಿರುತ್ತಾರೆ.**

**ಮರು ವಿಚಾರಣೆ: ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಜಯಲಕ್ಷ್ಮೀ ಎನ್. ಬಿ)
ಪ್ರಧಾನ ಹಿರಿಯ ಸಿ.ಜೆ. ಮತ್ತು ಜೆಎಂಎಫ್‌ಸಿ
ಕೆಜಿಎಫ್